# ಅಭಿನಯ ಬೆದರುಗೊಂಬೆ ಅಲ್ಲ

## ದೀಪಿಕಾ ದಾಸ್

### ಝೀ ಕನ್ನಡದ 'ನಾಗಿಣಿ'ಯ ಅಮೃತ



★ *ಹಟಕ್ಕೆ ಬಿದ್ದು ಮದವೆ ಆಗುತ್ತಿದ್ದೀರಿ. ಹೇಗಿದೆ ಮದುವೆ?*

ಮದುವೆಯನ್ನು ಶಾಸ್ತ್ರಬದ್ಧವಾಗಿ ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಎಲ್ಲ ನಿಯಮಗಳ ಅನುಸಾರ 'ನಾಗಿಣಿ ಕಲ್ಯಾಣೋತ್ಸವ' ಮಾಡಲಾಗುತ್ತಿದೆ. ಹಲವು ದಿನಗಳ ಕಾಲ ಅದೇ ಅದ್ದೂರಿಯ ಸಂಭ್ರಮ ಟಿವಿಯಲ್ಲಿರುತ್ತದೆ. ಗಂಡಿನ ಕಡೆಯವರು ತಮ್ಮ ಪ್ರತಿಷ್ಠೆಗೆ ತಕ್ಕಂತೆ ಮದುವೆಯನ್ನು ಮಾಡುತ್ತಿದ್ದಾರೆ. ನನ್ನದು ರೋಷದ ಹಟ. ನನ್ನ ಅಪ್ಪ ಅಮ್ಮನನ್ನು ಕೊಂದು ನಾಗಮಣಿಯನ್ನು ಅಪಹರಿಸಿದ್ದಾರೆ. ಅದನ್ನು ವಶಪಡಿಸಿಕೊಳ್ಳಬೇಕು. ಮದುಮಗ ಅರ್ಜುನ್‌ಗಿಂತ ಅವರ ಅಪ್ಪ ನನ್ನ ಮೊದಲ ಶತ್ರು. ಈಗ ಅವರ ವಂಶವನ್ನೇ ನಾಶ ಮಾಡಲು ಪಣ ತೊಟ್ಟಿದ್ದೇನೆ. ಆದರೆ ಮೊದಲ ಬಲಿ ಅರ್ಜುನ್‌ನದೇ ಆಗಬಹುದು.

★ *ಈ ರಹಸ್ಯಗಳೆಲ್ಲಾ ಹೇಗೆ ಗೊತ್ತಾದವು?*

ಅದೆಲ್ಲವನ್ನೂ ನನ್ನ ಚಿಕ್ಕಮ್ಮ ಹೇಳಿದ್ದಾಳೆ. ಸಾಯುವ ಮುನ್ನ ನನ್ನ ತಾಯಿ ತನ್ನ ಶಕ್ತಿಯನ್ನು ದೃಷ್ಟಿ ಮೂಲಕ ನನಗೆ ಹರಿಸಿದ್ದಾಳೆ. ಅದರ ಶಕ್ತಿಯನ್ನು ನನ್ನ ಕಣ್ಣುಗಳು ಹೀರಿಕೊಂಡಿವೆ. ನನ್ನ ದೃಷ್ಟಿ ನೆಟ್ಟರೆ ಎಲ್ಲಾ ಗೊತ್ತಾಗುತ್ತದೆ. ಅದರಿಂದ ವೈರಿಯ ಶಕ್ತಿಯನ್ನೂ ಸದೆಬಡಿಯಬಹುದು.

★ *ಅವಾಸ್ತವಿಕ ಕಥೆ ನಿಮಗೆ ಏನೆನಿಸುತ್ತದೆ?*

ನನಗೆ ಗೊತ್ತಿಲ್ಲದ ಕಥೆ. ತುಂಬಾ ಸಂಕೀರ್ಣವಾಗಿ ನಿರೂಪಿಸಲಾಗುತ್ತಿದೆ. ಪುರಾಣ ಮತ್ತು ಜನಪದೀಯರಲ್ಲಿ ನೆಲೆಗೊಂಡ ಕಥೆಯ ಸಾರವನ್ನೇ ತಗೆದುಕೊಂಡು ಆಧುನಿಕ ಸ್ಪರ್ಷ ನೀಡಲಾಗಿದೆ. ಕಥೆ ಸಂಪೂರ್ಣ ಕಾಲ್ಪನಿಕ. ವೈಯಕ್ತಿಕವಾಗಿ ನನಗೆ ತುಂಬಾ ಇಷ್ಟ. ನನ್ನ ನಟನೆಯನ್ನು ಮಕ್ಕಳು ತುಂಬಾ ಇಷ್ಟಪಡುತ್ತಿದ್ದಾರೆ. ಅಮೃತಳ ಉದ್ದೇಶಿತ ಕಾರ್ಯಕ್ಕೆ ಸಹಕಾರಿಯಾಗುವ 'ಶೇಷ' ಎನ್ನುವ ಪಾತ್ರವನ್ನೂ ನಾನೇ ನಿರ್ವಹಿಸುತ್ತಿದ್ದೇನೆ. ಇದರ ಕಥೆಯನ್ನೇ ಮೆಚ್ಚಿ ನಾನು ಈ ಧಾರಾವಾಹಿಯನ್ನು ಒಪ್ಪಿಕೊಂಡಿದ್ದೇನೆ. ಸಿನಿಮಾದಲ್ಲೇ ಇರಬೇಕು ಎಂದುಕೊಂಡಿದ್ದೆ. ಪಾತ್ರ ತುಂಬಾ ಅದ್ಭುತವೂ, ವೈವಿಧ್ಯತೆಯಿಂದಲೂ ಕೂಡಿದೆ. ಒಟ್ಟಾರೆ ಸವಾಲಿನ ಪಾತ್ರ.

★ *ನಿಮ್ಮನ್ನು ನೀವೇ ಪರಿಚಯಿಸಿಕೊಳ್ಳಿ..*

ನಾನು ಮೂಲತಃ ಹಾಸನದವಳು. ಬೆಂಗಳೂರಿನಲ್ಲಿ ಬೆಳೆದೆ. ಪಿಯುಸಿ ಓದುವ ಸಂದರ್ಭದಲ್ಲಿಯೇ 'ಕೃಷ್ಣ ರುಕ್ಮಿಣಿ' ಧಾರಾವಾಹಿಯಲ್ಲಿ ಬಣ್ಣ ಹಚ್ಚುವ ಮೂಲಕ ನಟನೆ ಆರಂಭಿಸಿದೆ. ಅಂಚೆ ಶಿಕ್ಷಣದಲ್ಲಿ ಪದವಿ ಪಡೆದೆ. ಆಮೇಲೆ ಕನ್ನಡ, ತೆಲುಗಿನಲ್ಲಿ ಐದಾರು ಸಿನಿಮಾ ಮಾಡಿದೆ. ನಿರ್ದೇಶಕ ಹಯವದನರಾವ್ 'ನಾಗಿಣಿ' ಸ್ಕ್ರಿಪ್ಟ್ ತೋರಿಸಿದರು. ಮತ್ತೆ ಟಿವಿ ಬೇಡ ಅಂದವಳು ನಾಗಿಣಿ ಪಾತ್ರಕ್ಕೆ ಮನಸೋತು ಬಂದಿದ್ದೇನೆ. ಕಲಾವಿದಳಾಗಿಯೇ ಬೆಳೆಯಬೇಕು ಎಂಬ ಕನಸು ನನ್ನದು. ಹೊಸ ಬಗೆಯ ಪಾತ್ರಗಳ ನಿರ್ವಹಣೆ ನನಗೆ ಇಷ್ಟ. ಬಣ್ಣ ಹಚ್ಚಿ ಬೆದರುಗೊಂಬೆಯಂತೆ ಬಂದು ಹೋಗುವ ಪಾತ್ರಗಳು ಇಷ್ಟ ಆಗುವುದಿಲ್ಲ. ಪ್ರತಿ ಪಾತ್ರವೂ ಸವಾಲಿನಿಂದ ಕೂಡಿರಬೇಕು. ಅದಕ್ಕೊಂದು ಮಹತ್ವ ಇರಲೇ ಬೇಕು. ಅಂತಹ ಪಾತ್ರಗಳಲ್ಲಿ ನಟಿಸಲು ಇಷ್ಟಪಡುತ್ತೇನೆ.

'ನಾಗಿಣಿ'ಯಲ್ಲಿ ತುಂಬಾ ಒಳ್ಳೆಯ ಪಾತ್ರ. ಇದಕ್ಕೆ ಡಾನ್ಸ್ ಬೇಕು. ಫೈಟ್‌ನ ಕೌಶಲ್ಯವೂ ಬೇಕು. ಒಟ್ಟಾರೆ ತುಂಬಾ ಖುಷಿಯಿಂದ ನಟಿಸುತ್ತಿದ್ದೇನೆ.

★ *ಗ್ರಾಫಿಕ್ಸ್ ಕುರಿತು ಹೇಳುವುದಾದರೆ...*

ಇಂದು ತಾಂತ್ರಿಕವಾಗಿಯೂ ತುಂಬಾ ಚೆನ್ನಾಗಿದೆ. ಪಾತ್ರ ನಿರ್ವಹಣೆಯಷ್ಟೇ ಗ್ರಾಫಿಕ್ ಕೂಡ ಮುಖ್ಯ. ಅಮೃತಳ ನಟನೆಗೆ ಸರಿಸಮವಾಗಿ ಗ್ರಾಫಿಕ್ ತನ್ನ ಅನನ್ಯತೆಯನ್ನು ಗುರುತಿಸಿಕೊಂಡಿದೆ. ಬೇರೆಯ ಸಿನಿಮಾ– ಧಾರಾವಾಹಿಗಳ ಗ್ರಾಫಿಕ್ ಜೊತೆ ಹೋಲಿಸಬಾರದು. ನನ್ನಷ್ಟಕ್ಕೆ ನಾನು ಹೋಲಿಸಿ ನೋಡಿದಾಗ ತುಂಬಾ ಚೆನ್ನಾಗಿ ನಾಗಿಣಿಯಲ್ಲಿ ಮಾಡಿದ್ದಾರೆ ಅನ್ನಿಸುತ್ತದೆ. ಹಾವಿನ ಚಟುವಟಿಕೆ ಸಂಪೂರ್ಣ ಗ್ರಾಫಿಕ್ ಮೇಲೆ ನಿಂತಿರುತ್ತದೆ.

★ *ಅವಕಾಶ ಅರಸುವ ಹೊಸಬರ ಬಗ್ಗೆ ಏನು ಹೇಳುತ್ತೀರಿ?*

ಪ್ರತಿಭೆ ಎನ್ನುವುದು ಎಲ್ಲರಲ್ಲಿಯೂ ಇರುತ್ತದೆ. ಅದನ್ನು ಗುರುತಿಸಬೇಕು. ತಮ್ಮಲ್ಲಿರುವ ಕೌಶಲ್ಯಕ್ಕೆ ಪೂರಕವಾಗಿ ತಾಲೀಮು ಮಾಡಬೇಕು. ಟಿವಿ/ ಸಿನಿಮಾ ಪ್ರವೇಶಿಸಬೇಕು ಎನ್ನುವವರು ಸಂಪೂರ್ಣ ನಟ/ ನಟಿ ಎಂದೇ ಕಾಲಿಡಬೇಕು. ನಟನೆ ಬಯಸುವ ಡಾನ್ಸ್, ಫೈಟ್‌ಗಳಿಗೂ ಒಂದಿಷ್ಟು ಪೂರ್ವ ತಯಾರಿ ಇರಬೇಕು. ನಂತರ ನಿರ್ದೇಶಕರು ತಮಗೆ ಬೇಕಾದಂತೆ ತಿದ್ದುತ್ತಾರೆ. ಒಂದು ಹಂತದವರೆಗೆ ನಟನೆಯ ವಿವಿಧ ಆಯಾಮಗಳು ಗೊತ್ತಿರಬೇಕು ಅಂತ ನನಗೆ ಅನ್ನಿಸುತ್ತದೆ. ದಟ್ಟ ಅವಕಾಶಗಳಂತೂ ಇದ್ದೇ ಇವೆ.

★ *ಸಮಯದ ಹೊಂದಾಣಿಕೆಯನ್ನು ಹೇಗೆ ಮಾಡುತ್ತಿದ್ದೀರಿ?*

ಕಷ್ಟ ಆಗುತ್ತಿದೆ. ಪರಸ್ಪರರ ಸಹಕಾರದಿಂದ ಅದು ಸಾಧ್ಯವಾಗುತ್ತಿದೆ. ತಿಂಗಳಲ್ಲಿ 20 ದಿನ ನಾಗಿಣಿಗೆ ಮೀಸಲಿಟ್ಟರೆ ಉಳಿದ ಹತ್ತು ದಿನ ಬಾಕಿ ಉಳಿದ ಸಿನಿಮಾಗಳಲ್ಲಿ ತೊಡಗುತ್ತೇನೆ. ಸುದೈವವಶಾತ್ ನನಗೆ ಎಲ್ಲರೂ ಸಹಕರಿಸಿ ಬಿಡುವಿನ ವೇಳೆಯಲ್ಲಿ ಚಿತ್ರೀಕರಿಸಲು ಅವಕಾಶ ಕಲ್ಪಿಸಿದ್ದಾರೆ.

■ ರಾಗು